ಸೊಸೈಟಿಗಳಲ್ಲಿ ನೀಡುತ್ತಿರುವ ಆಹಾರ ಧಾನ್ಯದ ಕಳಪೆ ಮಟ್ಟದ ಬಗ್ಗೆ

1283 (1511): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):-

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಈಗ ಸೊಸೈಟಿಗಳಲ್ಲಿ ನೀಡುತ್ತಿರುವ ಆಹಾರಧಾನ್ಯಗಳು ಕಳಪೆ ಮಟ್ಟವಾಗಿದ್ದು ಸಾರ್ವಜನಿಕರಿಂದ ಸರ್ಕಾರಕ್ಕೆ ದೂರು ಬಂದಿರುವುದೆ;

2. ಬಂದಿದ್ದಲ್ಲಿ, ಉತ್ತಮ ಧಾನ್ಯಗಳನ್ನು ಒದಗಿಸುವ ಆಲೋಚನೆ ಸರ್ಕಾರಕ್ಕಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

1. ಬಂದಿವೆ.

2. ನ್ಯಾಯಬೆಲೆ ಅಂಗಡಿಗಳಲ್ಲಿ ಕಳಪೆ ದರ್ಜೆಯ ಆಹಾರಧಾನ್ಯಗಳು ಇದ್ದಲ್ಲಿ ಭಾರತ ಆಹಾರ ನಿಗಮವು ಅಂತಹ ದಾಸ್ತಾನನ್ನು ಬದಲಾಯಿಸಿ ನೀಡುವುದಾಗಿರುತ್ತದೆ. ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ವಿತರಿಸಲಾಗುವ ಆಹಾರಧಾನ್ಯಗಳ ಒಳ್ಳೆಯ ಗುಣಮಟ್ಟವನ್ನು ಕಾಪಾಡುವಂತೆ ಭಾರತ ಆಹಾರ ನಿಗಮಕ್ಕೆ ತಿಳಿಸಲಾಗಿದೆ.

ದಾವಣಗೆರೆಯಲ್ಲಿ ರಂಗಮಂದಿರ ನಿರ್ಮಾಣ

1284 (1512): ಶ್ರೀ ಯುಜಮಾನ್ ಮೋತಿ ವೀರಣ್ಣ (ದಾವಣಗೆರೆ):-

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರವು ಕಲೆಯ ತವರೂರಾಗಿದ್ದು ಇಲ್ಲಿಗೆ ಒಂದು ಖಾಯಂ ರಂಗಮಂದಿರವು ಬೇಕಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು:-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಎಷರೀತವಾಗಿ ಜನರನ್ನು ತುಂಬುತ್ತಿರುವುದರ ಬಗ್ಗೆ

1285 (1533): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):-

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಓಡಿಸುವ ಬಸ್ಸುಗಳ ಒಳಗೂ ಮತ್ತು ಟಾಪ್

ಮೇಲೆ ನೂರಾರು ಜನರನ್ನು ತುಂಬುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಮುಂಜಾನೆ ಮತ್ತು ಸಾಯಂಕಾಲ ದಟ್ಟಣೆಯ ಸಮಯದಲ್ಲಿ ಕೆಲ ಮಾರ್ಗಗಳಲ್ಲಿ ಓವರ್ ಲೋಡಿಂಗ್ ಇರುವುದು ಕಂಡು ಬಂದಿದೆ.

ಆ. ಅತಿಯಾದ ಆರ್ಥಿಕ ಮುಗ್ಗಟ್ಟು ಹಾಗು ಸಿಬ್ಬಂದಿ ನೇಮಕಾತಿ ಮೇಲೆ ವಿಧಿಸಿದ ನಿರ್ಬಂಧದ ಪರಿಣಾಮವಾಗಿ 1989–90 ರಿಂದ 1991–92ರ ಅವಧಿಯಲ್ಲಿ ಅಭಿವೃದ್ಧಿಯು ಕುಂಠಿತಗೊಂಡಿತು. ವಿಭಾಗಗಳಿಗೆ ತಾತ್ಕಾಲಿಕವಾಗಿ ಚಾಲಕ:ನಿರ್ವಾಹಕರನ್ನು ಭರ್ತಿ ಮಾಡಿಕೊಳ್ಳಲು ತಿಳಿಸಲಾಗಿದೆ ಮತ್ತು ಹೆಚ್ಚಿನ ಸಂಪನ್ಮೂಲಗಳ ಕ್ರೋಢೀಕರಣದಿಂದಾಗಿ ಸಂಸ್ಥೆಯು ಏಪ್ರಿಲ್ 92ರಿಂದ ಫೆಬ್ರವರಿ 93ರ ಅವಧಿಯಲ್ಲಿ 322 ಅನುಸೂಚಿಗಳನ್ನು ಸೇರ್ಪಡೆ ಮಾಡಿರುತ್ತದೆ. ಮತ್ತು 1993–94ರಲ್ಲಿ ಮತ್ತೆ 1000 ಅನುಸೂಚಿಗಳನ್ನು ಸೇರಿಸುವ ಯೋಜನೆ ಇರುತ್ತದೆ.

ದಾವಣಗೆರೆಯಲ್ಲಿ ಕ್ರೀಡಾ ಹಾಸ್ಟೆಲ್‌ನ ವಸತಿ ಸೌಕರ್ಯ

1286 (1536): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):–

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರ ಕರ್ನಾಟಕದ ಮಧ್ಯಬಿಂದುವಾಗಿದ್ದು ಇಲ್ಲಿಗೆ ಅನೇಕ ಕಡೆಯಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದು ಅವರಿಗೆ ಈಗಿರುವ ಯುವಜನ ಮತ್ತು ಕ್ರೀಡಾ ಹಾಸ್ಟೆಲ್‌ನ ವಸತಿ ಸೌಕರ್ಯ ಸಾಕಾಗುತ್ತಿಲ್ಲವೆಂಬುದು ಸರ್ಕಾರ ಗಮನಿಸಿದೆಯೇ;

ಆ. ಗಮನಿಸಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿ ಸೀಮೆಎಣ್ಣೆ ಮಾರಾಟದ ಪರವಾನಗಿ ಪಡೆದವರ ಪಟ್ಟಿ

1287 (1618): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿರುವ ಸೀಮೆಎಣ್ಣೆ ಮಾರಾಟದ ಪರವಾನಗಿ ಪಡೆದವರ ಪಟ್ಟಿಯನ್ನು ಸರ್ಕಾರವು ನೀಡುವುದೇ (ಪೂರ್ಣ ವಿಳಾಸ, ಪೂರೈಕೆ ಮಾಡಲಾದ ಸೀಮೆಎಣ್ಣೆ ಪ್ರಮಾಣ ಹಾಗೂ ಹೊಂದಿಸಿದ ಪಡಿತರ ಚೀಟಿಗಳ ಸಂಖ್ಯೆಯೊಂದಿಗೆ);